ಬರುವಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಪರಿಷ್ಕರಿಸಿದ್ದಾರೆ. ಆದೇಶವನ್ನು ಹೊರ ಡಿಸುವುದು ತಡವಾದ್ದರಿಂದ ನಾಗರೀಕರಿಗೆ ಮುಂಚಿತವಾಗಿ ಪತ್ರಿಕೆಯ ಮೂಲಕ ಸೂಚನೆ ಕೊಡಲಾಗಲಿಲ್ಲ.

ಇ) ರಾಜ್ಯ ಸಾರಿಗೆ ಸಂಸ್ಥೆಯವರು ತೆಗೆದುಕೊಂಡ ತತ್ವಶಃ ತೀರ್ಮಾನದ (ಪಾಲಸಿ ಡಿಸಿಷನ್) ಪ್ರಕಾರ ಯಾವ ಯಾವ ನಗರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ವೇಗದೂತ ಹಾಗೂ ತಡೆರಹಿತ ವಾಹನಗಳನ್ನು ಓಡಿಸಲಾಗುತ್ತಿದೆಯೋ ಅಂತಹ ಕಡೆ ಪ್ರಯಾಣ ದರವನ್ನು ಹೆಚ್ಚಿಸ ಲಾಗಿದೆ. ಆದ್ದರಿಂದ ಎಲ್ಲಾ ವಿಭಾಗಗಳಲ್ಲೂ ಈ ನಿಯಮವನ್ನು ಅನುಸರಿಸಬೇಕಾಗು ತ್ತದೆ.

ಶ್ರೀ ಎಂ.ಜಿ. ಜರತಾರ್‌ಗರ್.— ಮಾನ್ಯ ಅಧ್ಯಕ್ಷರೇ ಮಾನ್ಯ ಸಾರಿಗೆ ಮಂತ್ರಿಗಳು ಕೆ.ಎಸ್. ಆರ್.ಟಿ.ಸಿ.ಯಲ್ಲಿ ಆಗುತ್ತಿರುವ ನಷ್ಟವನ್ನು ಕಡಿಮೆ ಮಾಡುವ ಸಲುವಾಗಿ ಪ್ರಯಾಣ ದರವನ್ನು ಹೆಚ್ಚಿಸಲು ಖಿ-ಟಿ-ಔಿರಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಇದಕ್ಕೆ ಕಾರಣವೇನು?

ಶ್ರೀ ಎಂ. ಪಿ. ಪ್ರಕಾಶ್.— ಪ್ರಯಾಣ ದರವನ್ನು ಪರಿಷ್ಕರಿಸುವಲ್ಲಿ ನಾವು ವಿಷಾದಪಡಿಸತಕ್ಕ ವಿಷಯವೆಂದರೆ, ಖಿ-ಟಿ-ಔಿರಲ್ಲಿ ನಗರ ಸಾರಿಗೆ ದರಗಳನ್ನು ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಿಗೂ ಅನ್ವಯ ಮಾಡತಕ್ಕದ್ದನ್ನು ದೈನಂದಿನ ಪತ್ರಿಕೆಗಳಲ್ಲಿ ಮುಂಚಿತವಾಗಿ ಪ್ರಕಟ ಮಾಡಲಿಕ್ಕಾಗಲಿಲ್ಲ, ಆದಕ್ಕೆ ಸರ್ಕಾರದ ಪರವಾಗಿ ನಾವು ವಿಷಾದ ವ್ಯಕ್ತ ಮಾಡುತ್ತಿದ್ದೇವೆ. ದರಗಳ ಹೆಚ್ಚಳ ನೀತಿಯ ನಿರ್ಧಾರದ ಪ್ರಕಾರವಾಗಿ ಇದು ಆಗಿದೆ.

ಶ್ರೀ ಬಿ. ಆರ್. ಯಾವಗಲ್.— ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಮತ್ತು ರಾಜ್ಯದ ಬಿ.ಟಿ.ಎಸ್. ನಲ್ಲಿ ಇರುವಂಥ ದರಗಳಲ್ಲಿ ವ್ಯತ್ಯಾಸ ಏನಾದರೂ ಇದೆಯೇ? ವ್ಯತ್ಯಾಸ ಇದ್ದರೆ ಏಕೆ?

ಶ್ರೀ ಎಂ.ಪಿ. ಪ್ರಕಾಶ್.— ನಗರ ಸಾರಿಗೆ ದರಗಳಲ್ಲಿ ಯಾವ ತರಹದ ವ್ಯತ್ಯಾಸವೂ ಇಲ್ಲ.

ಭರಮಸಾಗರದಲ್ಲಿ ಓಡುತ್ತಿರುವ ಖಾಸಗಿ ಬಸ್ಸುಗಳು

(೯೦) ಶ್ರೀ ಕೆ. ಶಿವಮೂರ್ತಿ (ಭರಮಸಾಗರ).— ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಭರಮಸಾಗರ ಕ್ಷೇತ್ರದಲ್ಲಿ ಎಷ್ಟು ಸರ್ಕಾರಿ ಬಸ್ಸುಗಳು ಹಾಗೂ ಎಷ್ಟು ಖಾಸಗಿ ಬಸ್ಸುಗಳು ಓಡಾಡುತ್ತಿವೆ.

ಆ) ಸಾರಿಗೆ ಸೌಕರ್ಯ ಒದಗಿಸಿಕೊಡಿ ಎಂದು ಸರಕಾರಕ್ಕೆ ಕೇಳಿಕೊಂಡರೂ ಸಹ ಬಸ್ಸು ಬಿಡ ಲಿಕ್ಕೆ ಈವರೆಗೆ ಸರಕಾರದವರು ಅನುಮತಿ ಕೊಡದಿರಲು ಕಾರಣಗಳೇನು

೧) ಚಿತ್ರದುರ್ಗದಿಂದ ಭರಮಸಾಗರ (ಕುರುಬರಹಳ್ಳಿ, ಹುಲೀಯೂರು, ಹುಣಸೇಕಟ್ಟೆ, ಗೌರಮ್ಮನಹಳ್ಳಿ ಮಾರ್ಗವಾಗಿ)

೨) ಚಿತ್ರದುರ್ಗದಿಂದ ಸಿರಿಗೆರೆಗೆ (ಚಿಕ್ಕಪುರ ಕ್ಯಾಸಪುರ, ಚಿಕ್ಕಲಗಟ್ಟಿ ಮಾರ್ಗ)

೩) ಚಿತ್ರದುರ್ಗದಿಂದ ಕಾತ್ರಳ, ಬಿದರಕೆರೆ, ಗುಂಡಿ ಕಾಲ್ಲರ್, ಹುಲಿಕಟ್ಟೆ ಮಾರ್ಗವಾಗಿ

ಇ) ಎಷ್ಟು ದಿವಸಗೊಳಗಾಗಿ ಬಸ್ಸಿನ ಸೌಕರ್ಯವನ್ನು ನಮ್ಮ ಕ್ಷೇತ್ರದ ಜನತೆಗೆ ಒದಗಿಸಿಕೊಡ ಲಾಗುವುದು.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೦೪ ಬಸ್ಸುಗಳು ಮತ್ತು ೪೧ ಖಾಸಗಿ ಬಸ್ಸು ಗಳು ಭರಮಸಾಗರ ಕ್ಷೇತ್ರದಲ್ಲಿ ಓಡುತ್ತಿವೆ.

ಆ) ಸಲಹೆ ಮಾಡಿರುವ ಮಾರ್ಗಗಳು ರಾಷ್ಟ್ರೀಕರಣಕ್ಕೆ ಒಳಪಡದ ವಲಯದಲ್ಲಿರುವುದರಿಂದ ಅನೇಕ ಖಾಸಗಿ ವಾಹನಗಳು ಓಡುತ್ತಿವೆ.

೧. ಈ ಮಾರ್ಗದಲ್ಲಿ ೧೮ ಖಾಸಗಿ ಬಸ್ಸುಗಳು ಚಿತ್ರದುರ್ಗದಿಂದ ಹುಲಿಯೂರಿಗೆ ಮತ್ತು ಮತ್ತು ೨ ಬಸ್ಸುಗಳು ಹುಣಸೇಕಟ್ಟೆಯಿಂದ ಗೌರಮ್ಮನಹಳ್ಳಿ ಮಾರ್ಗದಲ್ಲಿ ಓಡುತ್ತಿವೆ. ಕುರುಬರಹಳ್ಳಿಯು ಒಳಪ್ರದೇಶದಲ್ಲಿರುವುದರಿಂದ ಯಾವ ಬಸ್ಸು ಈ ಹಳ್ಳಿಗೆ ಹೋಗುತ್ತಿಲ್ಲ.

೨. ಮೂರು ಖಾಸಗಿ ಬಸ್ಸುಗಳು ಈ ಮಾರ್ಗದಲ್ಲಿ ಹಾಲಿ ಓಡುತ್ತಿವೆ.

೩. ಚಿತ್ರದುರ್ಗದಿಂದ ಕಾತ್ರಳ ಮಾರ್ಗವಾಗಿ ೪ ಬಸ್ಸುಗಳು ಓಡುತ್ತಿವೆ. ಗುಂಡಿ ಕಾಲ್ಲರೆ ಮತ್ತು ಹುಲಿಕಟ್ಟೆ ಹಳ್ಳಿಗಳಿಗೆ ಬಸ್ಸಿನ ಮಾರ್ಗ ಚೆನ್ನಾಗಿಲ್ಲದೇ ಇರುವುದರಿಂದ ಈ ಹಳ್ಳಿಗಳಿಗೆ ಯಾವ ಬಸ್ಸುಗಳಾಗಲಿ ಹೋಗುತ್ತಿಲ್ಲ.

೪) ಎಷ್ಟು ದಿವಸದೊಳಗಾಗಿ ಬಸ್ಸಿನ ಸೌಕರ್ಯ ಒದಗಿಸಿಕೊಡಲಾಗುವುದು ಎಂಬುದನ್ನು ಖಚಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಆದರೆ ಸಲಹೆ ಮಾಡಿದ ಮಾರ್ಗಗಳಲ್ಲಿ ವಾಹನಗಳನ್ನು ಓಡಿಸಲು ಸಾಧ್ಯ ಸಾಧ್ಯತೆಯನ್ನು ಈ ಪಲಯವು ರಾಷ್ಟ್ರೀಕರಣ ಮಾಡಿದಮೇಲೆ ಪರಿಶೀಲಿಸಲಾಗುವುದು. ಮತ್ತು ಖಾಸಗಿಯವರು ಬಸ್ಸುಗಳನ್ನು ಓಡಿಸಲು ಮುಂದೆ ಬಂದರೆ ಜಿಲ್ಲಾ ಪ್ರಾಧಿಕಾರ, ಚಿತ್ರದುರ್ಗದಿಂದ ರಹದಾರಿಗಳನ್ನು ಪಡೆದು ಬಸ್ಸುಗಳನ್ನು ಓಡಿಸಬಹುದು.

ಶ್ರೀ ಕೆ. ಶಿವಮೂರ್ತಿ.— ಇಲ್ಲಿ ಕೊಟ್ಟಿರತಕ್ಕ ಉತ್ತರ ನೋಡಿದರೆ ಬಹಳ ಶೋಚನೀಯವಾಗಿ ಕಾಣುತ್ತದೆ. ಅಧಿಕಾರಿಗಳು ಏನು ಅಲ್ಲಿ ಬರೆದುಕೊಡುತ್ತಾರೋ ಅದನ್ನು ಓದಿಬಿಟ್ಟರೆ ಉತ್ತರ ಎಂದು ತಿಳಿದುಕೊಂಡು ಬಿಡುತ್ತಾರೆ. ಪೂರ್ತಿ ಕ್ಷೇತ್ರದಲ್ಲಿ ಯಾವ ದಾರಿಯಲ್ಲಿ ಬಸ್‌ಗಳು ಓಡಾಡುತ್ತಿವೆಯೇ ಇಲ್ಲವೇ ಎನ್ನುವುದರ ಬಗ್ಗೆ ಮಂತ್ರಿಗಳ ಹತ್ತಿರ ನಾನು ಹೇಳಿದ್ದೇವೆ, ರೂಟ್ಸನ್ನು ಹೇಳಿದ್ದೇವೆ, ಡಿ.ಸಿ. ಯವರಿಗೆ ಬರೆದಿದ್ದೇವೆ, ಆರ್.ಟಿ.ಒ.ಗೆ ಹೇಳಿದ್ದೇವೆ, ಈಗ ಮಾನ್ಯ ಮಂತ್ರಿಗಳು ಬಸ್ ಹೋಗುತ್ತಿದೆ ಎಂದು ಹೇಳಿದ್ದಾರೆ, ಅಲ್ಲಿ ಬಸ್ ಓಡುತ್ತಾ ಇಲ್ಲ, ಜನಗಳೂ ಸಹ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರೆ. ಮತ್ತೆ ರಾಷ್ಟ್ರೀಕರಣ ವಿಚಾರವಾಗಿ ಹೇಳಿದರು, ಎಷ್ಟು ದಿವಸಗಳಲ್ಲಿ ನಮ್ಮ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡುತ್ತೀರಿ?

ಶ್ರೀ ಎಂ. ಪಿ. ಪ್ರಕಾಶ್.— ಅಧಿಕಾರಿಗಳು ಬರೆದುಕೊಟ್ಟ ಉತ್ತರ ಕೊಟ್ಟು ನಾವು ನುಣುಚಿಕೊಳ್ಳುತ್ತಾ ಇಲ್ಲ ಮತ್ತು ಅವರಿಗೆ ಇಷ್ಟವಾಗುವಂಥ ಉತ್ತರವನ್ನು ಕೊಡಲಿಕ್ಕೆ ಆಗುವುದಿಲ್ಲ. ವಾಸ್ತವ ಪರಿಸ್ಥಿತಿ ಏನೆಂದರೆ, ಅದು ಏಕಸ್ವಾಮ್ಯಕ್ಕೆ ಒಳಪಡಲಾರದಂಥ ಜಿಲ್ಲೆಯಾಗಿರುವುದರಿಂದ ತಾಂತ್ರಿಕವಾದ ಕೆಲವು ಕಾರಣಗಳಿರುತ್ತವೆ. ರಸ್ತೆ ಸಾರಿಗೆ ಇಲಾಖೆಯಾಗಲಿ, ಖಾಸಗಿಯವರಾಗಲಿ ಅವರು ಹೇಳಿರತಕ್ಕ ಊರುಗಳಿಗೆ ಬಸ್‌ಗಳನ್ನು ಹಾಕಬೇಕಾದರೆ ಪ್ರಾದೇಶಿಕ ಸಾರಿಗೆ ಕಛೇರಿಗೆ ಮೊದಲು ಪರವಾನಗಿಗಳಿಗೆ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಇಂತಹ ಪರವಾನಗಿಗಳನ್ನು ಪಡದನಂತರ ಬಸ್‌ಗಳನ್ನು ಓಡಿಸಲಿಕ್ಕೆ ಆಗುತ್ತದೆ. ರಾಷ್ಟ್ರೀಕರಣ ಮಾಡುವಂಥ ಸಂದರ್ಭದಲ್ಲಿ ಎಲ್ಲಾ ಹಳ್ಳಿಗಳಿಗೆ ಬಸ್‌ಗಳನ್ನು ವ್ಯವಸ್ಥೆ ಮಾಡಬಹುದು ಎಂದು ಹೇಳಿದ್ದೇನಷ್ಟೆ.

ಶ್ರೀ ಕೆ. ಶಿವಮೂರ್ತಿ.— ನನ್ನ ಕ್ಷೇತ್ರದಲ್ಲಿ ಸಿರಿಗೆರೆ ವಿದ್ಯಾ ಸಂಸ್ಥೆ ಇದೆ, ಅದು ಒಂದು ದೊಡ್ಡ ಗ್ರಾಮ, ಅಲ್ಲಿ ಬೃಹನ್ಮಠ ಇದೆ. ಅಲ್ಲಿ ಐದಾರು ಕಾಲೇಜುಗಳಿವೆ. ಬಹಳ ವಿದ್ಯಾರ್ಥಿಗಳು ಹಳ್ಳಿಗಾಡಿನಿಂದ ಬರುತ್ತಾರೆ, ಶಾಲಾ ಕಾಲೇಜುಗಳಿಗೆ ಹೋಗುತ್ತಾರೆ. ಆದ್ದರಿಂದ ಎಷ್ಟು ದಿವಸಗಳಲ್ಲಿ ಸಿರಿಗೆರೆ, ಭರಮಸಾಗರಕ್ಕೆ ಬಸ್‌ಗಳನ್ನು ಹಾಕುತ್ತೀರಿ?

ಶ್ರೀ ಎಂ. ಪಿ. ಪ್ರಕಾಶ್.— ಈ ಪ್ರಶ್ನೆಯು ವ್ಯಾಪ್ತಿಯಲ್ಲಿ ಸಿರಿಗೆರೆಗೆ ಬಸ್‌ಗಳನ್ನು ಒದಗಿಸತಕ್ಕಂಥಾದ್ದು ಬರುವುದಿಲ್ಲ. ಮಾನ್ಯ ಸದಸ್ಯರು ಮೊನ್ನೆ ಹಿರಿಯ ಅಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಈ ಬಗ್ಗೆ ಭರವಸೆ ತೆಗೆದುಕೊಂಡಿದ್ದಾರೆ. ಆದುದರಿಂದ ಅವರ ಬೇಡಿಕೆಯನ್ನು ಆದಷ್ಟು ಶೀಘ್ರವಾಗಿ ನೆರವೇರಿಸಿ ಕೊಡುತ್ತೇವೆ.